ಆ) ಹೌದು. ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಅಸಂಘಟಿತ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಕನಿಷ್ಠ ವೇತನವನ್ನು ಜಾರಿಗೊಳಿಸಲಾಗುತ್ತಿದೆ.

ಇ) ಸಮೀಕ್ಷೆಯನ್ನು ಕೈಗೊಂಡಿರುವುದಿಲ್ಲ. ಕಾರಣ ವಿವರಗಳು ಲಭ್ಯವಿರುವುದಿಲ್ಲ.

ಈ) 1. 62 ಉದ್ದಿಮೆಗಳನ್ನು ಅನುಸೂಚಿಯಲ್ಲಿ ಅಡಿಯಲ್ಲಿ ತರಲಾಗಿದೆ.

2. 56 ಉದ್ದಿಮೆಗಳಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿದೆ.

3. 16,818 ಪರಿವೀಕ್ಷಣೆಗಳನ್ನು ಮಾಡಲಾಗಿದೆ.

4. 134 ಮೊಕದ್ದಮೆಗಳನು ಹೂಡಲಾಗಿದೆ.

5. ಇಲ್ಲಿಯವರೆಗೆ 64 ಪ್ರಕರಣಗಳು ದೋಷನಿರ್ಣಯಗೊಂಡಿವೆ. ಮತ್ತು

6. ಕಾಯಿದೆಯ ಉಪಬಂಧಗಳನ್ನು ಕಟ್ಟುನಿಟ್ಟಾಗಿ ಜಾರಿತೆ ತರಲಾಗುತ್ತಿದೆ.

ಬಂಟ್ವಾಳ ಮೈಸೂರು ಹೆದ್ದಾರಿ ದುರಸ್ತಿ

228 (460) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬಂಟ್ವಾಳ ಮೈಸೂರು ರಾಜ್ಯ ಹೆದ್ದಾರಿಯು ಅತ್ಯಂತ ದುರಸ್ತಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ದುರಸ್ತಿಗಾಗಿ ಹಣ ಬಿಡುಗಡೆ ಮಾಡುವ ಇರಾದೆ ಸರ್ಕಾರಕ್ಕಿದೆಯೇ;

ಇ) ಹಾಗಿದ್ದಲ್ಲಿ, ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ದುರಸ್ತಿ ಕಾರ್ಯ ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ

ಆ) ದುರಸ್ತಿಗಾಗಿ ಈಗಾಗಲೇ ಹಣ ಬಿಡುಗಡೆ ಮಾಡಿದೆ

ಇ) ಈ ರಸ್ತೆಯು ವಾರ್ಷಿಕ ನಿರ್ವಹಣೆಗಾಗಿ ಈ ಸಾಲಿನಲ್ಲಿ 26.40 ಲಕ್ಷ ರೂ. ಬಿಡುಗಡೆ ಮಾಡಿದ್ದು ರಸ್ತೆಯ ಮರು ಡಾಂಬರೀಕರಣಕ್ಕಾಗಿ 91.00 ಲಕ್ಷ ರೂ. ಅನುದಾನ ಒದಗಿಸಲಾಗಿದೆ. ಈ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಲು ಕ್ರಮ ಕೈಗೊಂಡಿದ್ದು, ಕಾಮಗಾರಿಯನ್ನು 1998ರ ಮಳೆಗಾಲದ ಮುನ್ನ ಸಂಪೂರ್ಣಗೊಳಿಸಲಾಗುವುದು.

ಜಿಲ್ಲೆಗಳಲ್ಲಿ ರಸ್ತೆಗಳ ದುರಸ್ಥಿ ಕಾರ್ಯ

229 (515) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಜಿಲ್ಲೆಗಳಲ್ಲಿ ಬಹುತೇಕ ರಸ್ತೆಗಳ ಜಿಲ್ಲಾ ಪಂಚಾಯತ್‌ನ ಆಡಳಿತಕ್ಕೆ ಒಳಪಟ್ಟಿರುವುದರಿಂದ, ಬಹುಪಾಲು ರಸ್ತೆಗಳು ರಿಪೇರಿ ಆಗದೆ ತೊಂದರೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಗಳಲ್ಲಿ ಕೆಲವನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡು ರಿಪೇರಿಮಾಡುವ ಬಗ್ಗೆ ಸರ್ಕಾರದವರು ಪರಿಶೀಲಿಸಿರುವರೇ;

ಇ) ಹಾಗಿದ್ದಲ್ಲಿ, ಪ್ರತಿ ಜಿಲ್ಲೆ ಅಥವಾ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕಿ.ಮೀ. ರಸ್ತೆ ಪಹಿಸಿಕೊಳ್ಳಲಾಗುವುದು?

ಶ್ರಿ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಜಿಲ್ಲಾ ಪಂಚಾಯತ್ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವ ರಸ್ತೆಗಳು ಮುಖ್ಯ ಹಳ್ಳಿರಸ್ತೆ ತಾಲ್ಲೂಕು ಬೋರ್ಡ ರಸ್ತೆ ಮತ್ತು ಐ.ಸಿ. ಆರ್.ಸಿ., ಜೆ.ಆರ್.ವೈ. ಯೋಜನೆ ಅಡಿ ಮಾಡಿರುವುದರಿಂದ, ಅವು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆ ಮಟ್ಟಕ್ಕೆ ಇರದೇ ತೊಂದರೆಯಾಗಿರಬಹುದಾಗಿದೆ.

ಇ) ಇದಲ್ಲದೇ, ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 50 ಕಿ.ಮೀ ರಸ್ತೆಗಳ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವ ಚಿಂತನೆ ಇದೆ.

ದ. ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳು

230 (491) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು;

ಆ) ಈ ಜಿಲ್ಲೆಗಳಲ್ಲಿ ಔಷಧಿಗಳ ಕೊರತೆ ಹಾಗೂ ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಸರಕಾರದವರು ತೆಗೆದುದೊಂಡ ಕ್ರಮಗಳೇನು?

ಶ್ರೀ ಬಿ. ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1) ದಕ್ಷಿಣ ಕನ್ನಡ ಜಿಲ್ಲೆ - 7
2) ಉಡುಪಿ ಜಿಲ್ಲೆ - 7

ಆ) ಬಂದಿದೆ

ಇ) ಖಾಲಿ ಇರುವ ಸಹಾಯಕ ನಿರ್ದೇಶಕರ, ಪಶು ವೈದ್ಯಕೀಯ ಮೇಲ್ವಿಚಾರಕರ, ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ ಪಶು ವೈದ್ಯಕೀಯ ಸಹಾಯಕರ ಖಾಲಿ ಹುದ್ದೆಗಳನ್ನು ತರಬೇತಿ ಹೊಂದಿದ ಅಭ್ಯರ್ಥಿಗಳಿಂದ ತುಂಬಲು ಕ್ರಮ ಕೈಗೊಳ್ಳಲಾಗಿದೆ.